# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 193 |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.09.2022. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪಟ್ಟಾ ಭೂಮಿಯನ್ನು ಕಲ್ಲು ಗಣಿಗಾರಿಕೆಗೆ ಭೂ ಪರಿವರ್ತನೆ ಮಾಡಿದ ನಂತರ ಗಣಿಗಾರಿಕೆ ಪ್ರಾರಂಭಿಸಲು ಅನುಸರಿಸುವ ಪ್ರಕ್ರಿಯೆ ಏನು; (ಈ ಬಗ್ಗೆ ಇರುವ ಸುತ್ತೋಲೆ / ಮಾರ್ಗಸೂಚಿಯ ಪ್ರತಿಯನ್ನು ನೀಡುವುದು) | ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ತೆಗೆಯಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 32 ರಂತೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ನಿರ್ದಿಷ್ಟ ಉಪಖನಿಜಗಳ ಸಂಬಂಧ ಸರ್ಕಾರದ ಅನುಮೋದನೆ ಪಡೆದು ಹಾಗೂ ನಿರ್ದಿಷ್ಟವಲ್ಲದ ಉಪಖನಿಜಗಳ ಸಂಬಂಧ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯ ಅನುಮೋದನೆಯೊಂದಿಗೆ ಸಂಬಂಧಿಸಿದ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ. |
| ಆ) | ಪಟ್ಟಾ ಭೂಮಿಯನ್ನು ಕಲ್ಲು ಗಣಿಗಾರಿಕೆಗೆ ಭೂ ಪರಿವರ್ತನೆ ಮಾಡಿದ ನಂತರವೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಯವರು ಕಂದಾಯ ಇಲಾಖೆ ಯವರನ್ನು ನಿರಾಕ್ಷೇಪಣಾ ಪತ್ರ ಕೇಳುವ ಅವಶ್ಯಕತೆ ಇದೆಯೇ; ಇದ್ದಲ್ಲಿ, ಸದರಿ ಭೂಮಿಯನ್ನು ಗಣಿಗಾರಿಕೆಗೆ - | ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ ಕಲಂ 95 ರಂತೆ ಪಟ್ಟಾ ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿದಲ್ಲಿ, ಸದರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕಾಗಿರುತ್ತದೆ.<br><br>ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 32 ರಂತೆ ಪಟ್ಟಾ ಜಮೀನುಗಳಲ್ಲಿ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿಗೆ ನಿಯಮ 8(5) ರಂತೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವ ಬಗ್ಗೆ ಉಲ್ಲೇಖವಿರುತ್ತದೆ.<br><br>ಸದರಿ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಉದ್ದೇಶ ಕೆಳಕಂಡಂತಿರುತ್ತದೆ. |

. . . 2

| | | |
|---|---|---|
| | -ಭೂಪರಿವರ್ತನೆ ಮಾಡುವ ಸಮಯದಲ್ಲಿ ಮತ್ತು ಗಣಿ ಗುತ್ತಿಗೆ ನೀಡುವ ಸಮಯದಲ್ಲಿ ಪರಿಶೀಲಿಸುವ ವಿಷಯಗಳಲ್ಲಿ ಇರುವ ವ್ಯತ್ಯಾಸಗಳೇನು; ಒಂದೇ ಉದ್ದೇಶಕ್ಕೆ ಎರಡು ಬಾರಿ ಪರಿಶೀಲನೆ ಮತ್ತು ವರದಿ ಪಡೆಯುವ ಅವಶ್ಯಕತೆ ಇದೆಯೇ; | 1. ಕ್ವಾರಿಯಿಂಗ್ ಲೈಸೆನ್ಸ್ ಕೋರಿರುವ ಜಮೀನು ವಂಶಪಾರಂಪರಿಕವಾಗಿ ಬಂದಂತಹ ಅಥವಾ ಭೂಮಂಜೂರಾತಿ ಜಮೀನಾಗಿರುವುದನ್ನು ಖಚಿತಪಡಿಸಿಕೊಳ್ಳಲು.<br>2. ಸದರಿ ಜಮೀನಿನಲ್ಲಿ ದೊರೆಯುವ ಉಪಖನಿಜದ ಹಕ್ಕುಬಾಧ್ಯತೆಯ ಕುರಿತು ಸ್ಪಷ್ಟೀಕರಣಕ್ಕಾಗಿ.<br>3. ಅರ್ಜಿತ ಪ್ರದೇಶವು ಸಾರ್ವಜನಿಕ ರಚನೆಗಳಾದ ರಸ್ತೆ, ಮನೆ, ಶಾಲೆ, ರೈಲ್ವೆ ಲೈನ್, ಇತ್ಯಾದಿಗಳಿಂದ ಇರುವ ಅಂತರದ ಕುರಿತು ಹಾಗೂ ಇತ್ಯಾದಿ ಮಾಹಿತಿಗಾಗಿ. |
| ಇ) | ಈಗಾಗಲೇ ಕಲ್ಲುಗಣಿಗಾರಿಕೆಗೆ ಭೂಪರಿವರ್ತನೆಯಾಗಿದ್ದರೂ, ಮತ್ತೊಮ್ಮೆ ಕಂದಾಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಅವಶ್ಯಕತೆಯಿದೆಯೇ; | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 32 ರಂತೆ ಪಟ್ಟಾ ಜಮೀನುಗಳಲ್ಲಿ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿಗೆ ಸದರಿ ನಿಯಮಗಳ ನಿಯಮ 8(5) ರಂತೆ ಕಂದಾಯ ಇಲಾಖೆಯ ನಿರಾಕ್ಷೇಪಣಾ ಪತ್ರ ಅವಶ್ಯವಿರುತ್ತದೆ. |
| ಈ) | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ಉಪ ನಿಯಮ 8(6) ಅನ್ವಯ ಪತ್ರ ಸ್ವೀಕರಿಸಿದ ಎಷ್ಟು ದಿನಗಳಲ್ಲಿ ಕಲ್ಲುಗಣಿ ಗುತ್ತಿಗೆಗೆ ಕಂದಾಯ ಇಲಾಖೆ ಯವರು ತಮ್ಮ ಅಭಿಪ್ರಾಯವನ್ನು ಸಲ್ಲಿಸಬೇಕಾಗಿದ್ದು, ನಿಗದಿತ ಅವಧಿಯಲ್ಲಿ ಅಭಿಪ್ರಾಯ ಸಲ್ಲಿಸದಿದ್ದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮವೇನು; | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ಉಪ ನಿಯಮ 8(6) ರ ನಿಯಮ ಪ್ರಸ್ತುತ ಜಾರಿಯಲ್ಲಿರುವುದಿಲ್ಲ. ಸದರಿ ನಿಯಮವನ್ನು ದಿನಾಂಕ 30.06.2020ರಂದು ಜಾರಿಗೆ ಬಂದಿರುವ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2020 ರಲ್ಲಿ ಕೈಬಿಡಲಾಗಿದೆ. |
| ಉ) | ರಾಜ್ಯದಲ್ಲಿ ಈ ರೀತಿ ನಿಗದಿತ ಅವಧಿ ಮುಗಿದಿದ್ದರೂ ಕಲ್ಲುಗಣಿ ಗುತ್ತಿಗೆಗೆ ಕಂದಾಯ ಇಲಾಖೆಯಿಂದ ಅಭಿಪ್ರಾಯ ಸಲ್ಲಿಸದಿರುವ ಪ್ರಕರಣಗಳು ಎಷ್ಟು ಮತ್ತು ಅದಕ್ಕೆ ಕಾರಣವೇನು; (ಜಿಲ್ಲಾವಾರು, ಅರ್ಜಿವಾರು ವಿವರ ನೀಡುವುದು) | 2016-17ನೇ ಸಾಲಿನಿಂದ ಪಟ್ಟಾ ಜಮೀನುಗಳಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಕ್ವಾರಿಯಿಂಗ್ ಲೈಸೆನ್ಸ್ ಕೋರಿ ಒಟ್ಟು 1320 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಪೈಕಿ 957 ಅರ್ಜಿಗಳಿಗೆ ಕಂದಾಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳು ಸ್ವೀಕೃತವಾಗಿರುತ್ತವೆ. 363 ಅರ್ಜಿಗಳ ಸಂಬಂಧ ಕಂದಾಯ ಇಲಾಖೆಯ ನಿರಾಕ್ಷೇಪಣಾ ಪತ್ರ ಸ್ವೀಕೃತವಾಗಿರುವುದಿಲ್ಲ. |

. . . 3

| | | |
|---|---|---|
| . | | ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ 455 ಅರ್ಜಿಗಳ ಸಂಬಂಧ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿ ನೀಡಲಾಗಿದೆ,<br>ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿ ಕೋರಿ ಸ್ವೀಕೃತವಾಗಿರುವ ಒಟ್ಟು 1320 ಅರ್ಜಿಗಳ ಪೈಕಿ 455 ಅರ್ಜಿಗಳಿಗೆ ಭೂಪರಿವರ್ತನಾ ಆದೇಶ ಲಭ್ಯವಿದ್ದು, ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿ ನೀಡಲಾಗಿದೆ. 865 ಪ್ರಕರಣಗಳಿಗೆ ಭೂಪರಿವರ್ತನಾ ಆದೇಶ ಲಭ್ಯವಿರುವುದಿಲ್ಲ.<br>ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಊ) | ಉದ್ದೇಶ ಪೂರ್ವಕವಾಗಿ ವಿಳಂಬ ಧೋರಣೆ ಅನುಸರಿಸುತ್ತಾ, ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? | ಪಟ್ಟಾ ಜಮೀನುಗಳಲ್ಲಿ ಕಲ್ಲು ಗಣಿಗಾರಿಕೆ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು ಹಾಗೂ ಭೂಪರಿವರ್ತನಾ ಆದೇಶ ಸ್ವೀಕೃತವಾದ ನಂತರ ಲೈಸೆನ್ಸ್ ಮಂಜೂರಾತಿಗೆ ಯಾವುದೇ ವಿಳಂಬಕ್ಕೆ ಆಸ್ಪದ ನೀಡದಂತೆ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿಗೆ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ ಸಿಐ-ಎಂಎಂಎನ್/350/2022

Halappa BA

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ

## ಪಟ್ಟಾ ಜಮೀನುಗಳಲ್ಲಿನ ಉಪ ಖನಿಜಗಳ ಗಣಿಗಾರಿಕೆಗಾಗಿ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿಗೆ ಸ್ವೀಕೃತವಾದ ಅರ್ಜಿಗಳ ವಿಲೇವಾರಿ ಕುರಿತು

| ಕ್ರ. ಸಂ. | ಜಿಲ್ಲೆ | ನಿರ್ದಿಷ್ಟ ಕಲ್ಲುಗಣಿ ಲೈಸೆನ್ಸ್ ಅರ್ಜಿಗಳು | | | | ನಿರ್ದಿಷ್ಟವಲ್ಲದ ಕಲ್ಲುಗಣಿ ಲೈಸೆನ್ಸ್ ಅರ್ಜಿಗಳು | | | |
|---|---|---|---|---|---|---|---|---|---|
| | | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಕಂದಾಯ ಇಲಾಖೆ ನಿರಾಕ್ಷೇಪಣಾಪತ್ರ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಮಂಜೂರಾತಿ ನೀಡಿರುವ ಅರ್ಜಿಗಳ ಸಂಖ್ಯೆ | ಭೂಪರಿವರ್ತನೆ ಆದೇಶ ಸಲ್ಲಿಸಿಲ್ಲದ ಕಾರಣ ಬಾಕಿ ಇರುವ ಅರ್ಜಿಗಳ ಸಂಖ್ಯೆ | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಕಂದಾಯ ಇಲಾಖೆ ನಿರಾಕ್ಷೇಪಣಾಪತ್ರ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಮಂಜೂರಾತಿ ನೀಡಿರುವ ಅರ್ಜಿಗಳ ಸಂಖ್ಯೆ | ಭೂಪರಿವರ್ತನೆ ಆದೇಶ ಸಲ್ಲಿಸಿಲ್ಲದ ಕಾರಣ ಬಾಕಿ ಇರುವ ಅರ್ಜಿಗಳ ಸಂಖ್ಯೆ |
| 1 | ಬಳ್ಳಾರಿ | 2 | 1 | 0 | 2 | 0 | 0 | 0 | 0 |
| 2 | ಬೆಳಗಾವಿ | 0 | 0 | 0 | 0 | 141 | 89 | 62 | 72 |
| 3 | ಕೊಪ್ಪಳ | 214 | 210 | 137 | 77 | 44 | 43 | 30 | 14 |
| 4 | ಕಲಬುರಗಿ | 0 | 0 | 0 | 0 | 32 | 16 | 4 | 28 |
| 5 | ಯಾದಗಿರಿ | 5 | 1 | 1 | 4 | 19 | 17 | 10 | 9 |
| 6 | ರಾಯಚೂರು | 62 | 39 | 29 | 33 | 17 | 12 | 11 | 6 |
| 7 | ವಿಜಯನಗರ(ಹೊಸಪೇಟೆ) | 0 | 0 | 0 | 0 | 31 | 23 | 0 | 31 |
| 8 | ಬೀದರ್ | 0 | 0 | 0 | 0 | 2 | 0 | 0 | 2 |
| 9 | ಬಾಗಲಕೋಟೆ | 1 | 0 | 0 | 1 | 24 | 15 | 1 | 23 |
| 10 | ವಿಜಯಪುರ | 0 | 0 | 0 | 0 | 107 | 84 | 2 | 105 |
| 11 | ಗದಗ | 0 | 0 | 0 | 0 | 52 | 23 | 10 | 40 |
| 12 | ಹಾವೇರಿ | 1 | 1 | 0 | 1 | 12 | 11 | 8 | 4 |
| 13 | ಧಾರವಾಡ | 0 | 0 | 0 | 0 | 52 | 44 | 30 | 22 |
| 14 | ಉತ್ತರ ಕನ್ನಡ | 3 | 1 | 0 | 3 | 45 | 31 | 2 | 43 |
| 15 | ದಾವಣಗೆರೆ | 0 | 0 | 0 | 0 | 63 | 61 | 49 | 14 |
| 16 | ಚಿತ್ರದುರ್ಗ | 4 | 2 | 0 | 4 | 6 | 3 | 0 | 6 |
| 17 | ಬೆಂಗಳೂರು ಗ್ರಾಮಾಂತರ | 4 | 3 | 0 | 4 | 1 | 0 | 0 | 1 |
| 18 | ರಾಮನಗರ | 28 | 13 | 10 | 18 | 4 | 2 | 2 | 2 |
| 19 | ಚಾಮರಾಜನಗರ | 17 | 12 | 0 | 17 | 5 | 0 | 0 | 5 |
| 20 | ದಕ್ಷಿಣ ಕನ್ನಡ | 1 | 1 | 0 | 1 | 15 | 8 | 0 | 15 |
| 21 | ತುಮಕೂರು | 21 | 13 | 6 | 15 | 19 | 9 | 2 | 17 |
| 22 | ಬೆಂಗಳೂರುನಗರ | 0 | 0 | 0 | 0 | 0 | 0 | 0 | 0 |
| 23 | ಚಿಕ್ಕಬಳ್ಳಾಪುರ | 2 | 0 | 0 | 2 | 10 | 3 | 2 | 8 |
| 24 | ಕೋಲಾರ | 1 | 1 | 0 | 1 | 3 | 1 | 0 | 3 |
| 25 | ಮಂಡ್ಯ | 1 | 0 | 0 | 1 | 90 | 61 | 9 | 31 |
| 26 | ಮೈಸೂರು | 29 | 24 | 3 | 26 | 16 | 15 | 8 | 8 |
| 27 | ಕೊಡಗು | 0 | 0 | 0 | 0 | 6 | 5 | 0 | 6 |
| 28 | ಹಾಸನ | 4 | 2 | - | 4 | 25 | 9 | - | 25 |
| 29 | ಉಡುಪಿ | 6 | 4 | 0 | 6 | 11 | 9 | 0 | 11 |
| 30 | ಚಿಕ್ಕಮಗಳೂರು | 6 | 3 | 3 | 3 | 51 | 30 | 24 | 27 |
| 31 | ಶಿವಮೊಗ್ಗ | 0 | 0 | 0 | 0 | 5 | 2 | 0 | 5 |
| | **ಒಟ್ಟು** | **412** | **331** | **189** | **223** | **908** | **626** | **266** | **583** |

CI - 350 MMN - 2022

Deputy Director (Min. Admn)
Dept. of Mines & Geology
Bangalore-560001